ಪ್ರಿಯವಾದ ಕೆಲಸ. ಎಲ್ಲಾ ಮನೆಯವರ ಪರಿಚಯವಾಗಿದ್ದು, ಸ್ವಲ್ಪ ತಿಳುವಳಿಕೆಯೂ ಬಂದಿದ್ದರಿಂದ ಎಲ್ಲಾ ನಿವಾಸಿಗಳೊಡನೆ ಸರಾಗವಾಗಿ ಬೆರೆಯುತ್ತಿದ್ದ. ಅವರ ಮನೆಗಳಿಗೆ ಹೋಗಿ ಅಡ್ಡಾಡಿ ಬರುತ್ತಿದ್ದ. ಈಗ ಕಾಯನ ಮೇಲೆ ಹೆಚ್ಚು ಅವಲಂಬಿತನಾಗುತ್ತಿರಲಿಲ್ಲ. ಈಗ ಕೃಷಿಯ ಜಾಗದಲ್ಲಿ ಹಣ್ಣುಗಳು ಬಿಡುತ್ತಿದ್ದರಿಂದ ಇದುವರೆಗೂ ಇಲ್ಲದ ಮಂಗಗಳ ಉಪದ್ರವ ಶುರುವಾಗಿತ್ತು. ಹಕ್ಕಿಗಳು ಬಂದು ಬೀಜಗಳು ತಿನ್ನುತ್ತಿದ್ದವು. ಮಂಗಗಳನ್ನು ನಿಯಂತ್ರಿಸುವುದೇ ದೊಡ್ಡ ಸಾಹಸವಾಗಿತ್ತು. ಕಾಯ ಮತ್ತು ಜಂಪಯ್ಯ ಇಡೀ ದಿನ ಬೆತ್ತ ಹಿಡಿದು ಬೆದರಿಸಿದರೂ, ಅವರ ಭೀತಿ ಇಲ್ಲದೆ ಮೈಮೇಲೆ ಎಗರಿ ಬರುವಂಥ ರಣ ಮಂಗಗಳಿದ್ದವು. ಮಂಗಗಳನ್ನ ಓಡಿಸಲು ಪಟಾಕಿ ಹೊಡೆದರೂ ಅವು ಮುಗಿದ ಬಳಿಕ ತಂಡೋಪಾದಿಯಾಗಿ ಬಂದು ಮತ್ತೆ ದಾಳಿ ಇಡುತ್ತಿದ್ದವು.

* * *

ಹರೆಯಕ್ಕೆ ಬಂದ ಹುಡುಗನಿಗೆ ಇದ್ದಕ್ಕಿದ್ದಂತೆ ಮದುವೆ ಮಾಡ ಹೊರಟರೆ, ಅವನಲ್ಲಿ ಚಿಮ್ಮುವ ಉತ್ಸಾಹ ಹೇಗೋ ಹಾಗೇ ಆಗಿತ್ತು ಕಾರಗದ್ದೆಯ ಸ್ಥಿತಿ. ಅಲ್ಲಿನ ಶಾಸಕರು ಮುಖ್ಯಮಂತ್ರಿಗಳಿಗೆ ಹೆಚ್ಚು ಆತ್ಮೀಯರಾಗಿದ್ದರಿಂದ ತಿಂಗಳು ಕಳೆಯುತ್ತಲೇ ದೊಡ್ಡ ಅನುದಾನದ ಘೋಷಣೆಯಾಯಿತು. ಈಗ ಇದ್ದಕ್ಕಿದ್ದಂತೆ ಹಲವು ಪಲ್ಲಟಗಳಿಗೆ ಊರು ಸಾಕ್ಷಿಯಾಯಿತು. ಇಷ್ಟು ದಿನ ಮರಗಟ್ಟಿದಂತಿದ್ದ ಅಧಿಕಾರದಲ್ಲಿದ್ದ ಪಕ್ಷ ಇದ್ದಕ್ಕಿದ್ದಂತೆ ಮುನ್ನಲೆಗೆ ಬಂದಿತು. ಹೊಸ ಕಾಲೇಜು, ಆಸ್ಪತ್ರೆಗೆ ಇನ್ನಷ್ಟು ಕಾಯಕಲ್ಪದ ಜೊತೆಗೆ ರಸ್ತೆ ಕಾಮಗಾರಿ ಹೀಗೆ ಏನೇನೋ ಯೋಜನೆಗಳ ಘೋಷಣೆಯಾದವು. ಸಣ್ಣ ಊರಾದರೂ ಮುಗಿಲು ಮುಟ್ಟಿದ ದರ ಹೊಂದಿದ್ದ ಜಾಗಗಳು ಈಗ ಇನ್ನಷ್ಟು ಏರಿದವು. ಕಾಮಗಾರಿಗಳು ಶುರುವಾದ ಬಳಿಕ ಕಾರಗದ್ದೆಯಿಡೀ ಹೊಸ ಸ್ವರೂಪಕ್ಕೆ ತೆರೆದುಕೊಂಡಿತ್ತು.

ಹೀಗಿರುವಾಗಲೇ ವರ್ಷ ಋತು ಕಾಲಿಟ್ಟಿತ್ತು. ಅಜ್ಜರಕಾಡಿನ ನಿವಾಸಿಗಳು ಮಳೆಗಾಲಕ್ಕೆ ಸಿದ್ಧತೆ ಮುಂಚಿತವಾಗಿ ನಡೆಸಿಕೊಂಡು ಬಂದರು. ಮನೆ ಮಾಡು, ಪಾಯ, ಸಬಲ ಮಾಡಿಕೊಂಡರು. ಕಟ್ಟಿಗೆ ಒಟ್ಟು ಮಾಡಿಕೊಂಡರು. ಕಾಡಿಗೆ ಹೋಗಿ ಹಣ್ಣು ತರುವುದು ತಪ್ಪಿಸಲು ವಾರಕ್ಕಾಗುವಷ್ಟು ಒಂದೇ ಬಾರಿ ಹೋಗಿ ತಂದು ಶೇಖರಿಸಿಡುತ್ತಿದ್ದರು. ಸುರಿಯುವ ಮಳೆಯ ಪ್ರಮಾಣ ಅಂದಾಜಿಸಲಾಗದ ಕಾರಣ ಹೊಸ ಹೊಸ ಸಮಸ್ಯೆಗಳು ಎದುರಿಸಲೇ ಬೇಕಾಗಿತ್ತು. ಇಷ್ಟು ಸಾಲದು ಎಂಬಂತೆ ಒಂದು ದಿನ ಇದ್ದಕ್ಕಿದ್ದಂತೆ ಅದುವರೆಗೂ ಇರದ ಅಜ್ಜರಕಾಡಿನ ಜಾಗದ ಮಾಲೀಕ ಧುತ್ತೆಂದು ಪ್ರತ್ಯಕ್ಷನಾಗಿದ್ದ. ಅವನ ಜಾಗದಲ್ಲಿ ಅತಿಕ್ರಮಿಸಿ ಕುಳಿತ ಅಲ್ಲಿನ ನಿವಾಸಿಗಳನ್ನು ಕಂಡು ಕೆಂಡಾಮಂಡಲನಾದ.

ಜಂಪಯ್ಯ ಮಳೆಗೆ ನೆನೆಯದಂತೆ ಪ್ಲಾಸ್ಟಿಕು ಹೊದಿಕೆ ಹೊದ್ದು ನಡೆದು ಬರುತ್ತಿದ್ದಾಗ ಎದುರು ಬಂದ ಠಾಕುಠೀಕಾದ ದಿರಿಸು ಧರಿಸಿ, ದೊಡ್ಡ ಬಣ್ಣದ ಕೊಡೆ ಹಿಡಿದು ಎದುರಾದ ವ್ಯಕ್ತಿ, ಅರಣ್ಯ ಅಧಿಕಾರಿ ಇರಬೇಕೆಂದು ಭಾವಿಸಿ, 'ಯಾರಣ್ಣ ನೀವು, ಏನು ಬೇಕಿತ್ತು..?' ಎಂದು ಪ್ರಶ್ನಿಸಿದ. ಆ ಅಪರಿಚಿತನಿಗೆ ಇಂಥ ಕಡೆ ನಡೆದು ಅಭ್ಯಾಸವಿಲ್ಲವೆಂದು ಅವನ ಕೆಸರಾದ ಬೆಲೆಬಾಳುವ ಶೂ ಮತ್ತು ಪ್ಯಾಂಟಿನ ಕೆಂಪಾದ ತುದಿಯೇ ಹೇಳುತ್ತಿತ್ತು. ಅವನು ಅಸಹನೆಯಿಂದ ಧಾವಿಸಿ ಬರುತ್ತಿದ್ದದ್ದನ್ನು ಕಂಡು ಜಂಪಯ್ಯ ಸೋಜಿಗವಾಗಿ ಪ್ರಶ್ನಿಸಿದಾಗ ಆತ ಎಗರಿ ಬಿದ್ದ, 'ಅದನ್ನು ನಾವು ಕೇಳಬೇಕು..! ಯಾರು ನೀವೆಲ್ಲಾ..? ಯಾರಪ್ಪನ ಜಾಗ ಎಂದು ಇಲ್ಲಿ ಮನೆ ಮಾಡಿ ಕೂತಿದ್ದೀರಿ..? ಇದು ನನ್ನ ಜಾಗ .. ಇದರ ಮಾಲಕ ನಾನು.. ಮರ್ಯಾದೆಯಿಂದ ಇಪ್ಪತ್ನಾಲ್ಕು ಗಂಟೆಗಳ ಒಳಗೆ ಖಾಲಿ ಮಾಡದಿದ್ದರೆ.. ಪೋಲಿಸ್ ತರಬೇಕಾಗುತ್ತೆ..' ಮಳೆಯ ಗುಡುಗಿಗಿಂತ ಒಂದು ಸುತ್ತು ಜೋರಾಗಿಯೇ ಅಬ್ಬರಿಸಿದ. ಜಂಪಯ್ಯನಿಗೆ ನಿಂತಲ್ಲೇ ಸಿಡಿಲು ಹೊಡೆದಂತಾಗಿತ್ತು. ಇಷ್ಟು ವರ್ಷಗಳ ಕಾಲ ಒಂದು ಭಂಡ ಧೈರ್ಯದಲ್ಲಿ ಮನೆ ಕಟ್ಟಿ ಕಾಲ ಕಳೆದಿದ್ದ. ಇಂಥ ಪ್ರಸಂಗ ಎದುರಾಗಬಹುದೆಂಬ ಕಲ್ಪನೆ ಇರಲಿಲ್ಲ. ಆದರೆ ವಾಸ್ತವವನ್ನು ಎದುರಿಸಲೇಬೇಕಿತ್ತು. ಅವನನ್ನು ನಂಬಿ ಇನ್ನೂ ಏಳು ಮನೆಗಳಿದ್ದವು.

ಜಂಪಯ್ಯ ಅನುನಯದ ಸ್ವರದಲ್ಲಿ, 'ಇದು ನಮ್ಮದೂಂತ ನಾವು ಹೇಳಿಲ್ಲ.. ದಯವಿಟ್ಟು ಸ್ವಲ್ಪ ಸಮಧಾನದಿಂದ ಕೇಳಿ.. ನಮಗೆ ಇಲ್ಲಿ ಯಾವ ಹಕ್ಕೂ ಇಲ್ಲ.. ಅದು ನಮಗೆ ಗೊತ್ತು..ಆದರೆ ಇಲ್ಲಿರುವವರೆಲ್ಲ ಕಡು ಬಡವರು.. ಕೂಲಿ ಮಾಡಿ ಜೀವನ ಮಾಡುವವರು.. ಮನೆ ಇಲ್ಲದವರು.. ತಾತ್ಕಾಲಿಕ ಗುಡಿಸಲು ಕಟ್ಟಿ ನಿಂತಿದ್ದಾರೆ.. ಬೇಕಾದರೆ ನೀವೇ ನೋಡಿ' ಎಂದ. ಆತನಿಗೆ ಆಲಿಸುವ ವ್ಯವಧಾನ ಇರಲಿಲ್ಲ.

'ಅದೆಲ್ಲಾ ನನಗೆ ಗೊತ್ತಿಲ್ಲಯ್ಯ.. ಇದು ನಮ್ಮ ಜಾಗ.. ನಮಗೆ ಬಿಟ್ಟು ಕೊಡಿ.. ನಮ್ಮ ಜಾಗದ ನಾಲ್ಕು ಮೂಲೆಗಳಲ್ಲೂ ಸರ್ವೆ ಕಲ್ಲು ಇದೆ. ಇಲ್ಲಿ ಕೇಳುವವರು ಯಾರೂ ಇಲ್ಲ ಅಂತ ಖುಷಿ ಬಂದ ಹಾಗೆ ಮನೆ ಕಟ್ಟಿ ಕೂತಿದೀರಾ..? ನಾಳೆ ಬೆಳಿಗ್ಗೆ ಬರ್ತೀನಿ.. ಎಲ್ಲಾ ಖಾಲಿ ಆಗಿರಬೇಕು.. ಅಷ್ಟೇ..' ಎಂದು ತಾಕೀತು ಮಾಡಿದ.

'ಈ ಮಳೆಗಾಲದಲ್ಲಿ.. ಈ ರೀತಿ ಧಾರಾಕಾರವಾಗಿ ಸುರಿಯುವ ಮಳೆ ಮಧ್ಯೆ ಹೋಗು ಎಂದರೆ ಎಲ್ಲಿಗೆ ಹೋಗುವುದು..? ದಯವಿಟ್ಟು ಪರಿಸ್ಥಿತಿ ಅರ್ಥ ಮಾಡಿಕೊಳ್ಳಿ.. ಇಲ್ಲಿ ನಮ್ಮದು ಜಾಗ ಅಂತ ಹೇಳುವವರು ಯಾರೂ ಇಲ್ಲ.. ಎಲ್ಲಾ ನಿಮ್ಮದೇ.. ಒಪ್ಪಿಕೊಳ್ಳುತ್ತೇವೆ.. ಆದರೆ ಮಾನವೀಯ ದೃಷ್ಟಿಯಿಂದ ನಮ್ಮ ಬಗ್ಗೆ ಯೋಚಿಸಿ.. ಕೈ ಮುಗೀತೇವೆ..' ಎಂದು ವಿನಂತಿಸಿಕೊಂಡ.

'ಆಗಲ್ಲಯ್ಯಾ.. ಸಿಕ್ಕಸಿಕ್ಕ ಜಾಗದಲ್ಲಿ ಮನೆ ಕಟ್ಟಿದ್ದು ನಿಮ್ಮ ತಪ್ಪು.. ನಾನು ಹೊರದೇಶದಿಂದ ಒಂದು ತಿಂಗಳ ರಜೆ ಹಾಕಿ ಬಂದಿದೀನಿ.. ಕಾರಗದ್ದೇಲಿ ಈಗ ನಮ್ಮವರು ಅಂತ ಯಾರೂ ಇಲ್ಲ.. ಈ ಜಾಗದ ಸಲುವಾಗಿ ಬಂದಿದೀನಿ.. ನನಗೆ ಇನ್ನೂ ಬೇರೆ ಅನೇಕ ಕೆಲಸಗಳಿವೆ.. ಇದ್ರ ಹಿಂದೆ ಬೀಳಲು ಆಗಲ್ಲ.. ಕೂಡಲೇ ನೀವು ಎಲ್ಲಾ ಖಾಲಿ ಆಗಿರಬೇಕು..ಅಷ್ಟೇ..' ಆತ ಬಂದ ದಾರಿ ಹಿಡಿದ. ಜಂಪಯ್ಯ ಆಕಾಶವೇ ತಲೆಯ ಮೇಲೆ ಕವುಚಿ ಬಿದ್ದಂತೆ ಕಾಲೆಳೆದುಕೊಂಡು ಸುರಿವ ಮಳೆಯಲ್ಲಿ ನೆನೆಯುತ್ತ ಬಂದಾಗ ಬಾಗಿಲಲ್ಲ ನಿಂತಿದ್ದ ಕಾಯ ನಿಂತಲ್ಲಿಂದ ಕೂಗಿದ, 'ಇದೇನು ಜಂಪಣ್ಣ..? ಮಳೇಲಿ ನೆನೆದು ಬರ್ತಿದ್ದಿ..? ಏನಾಯಿತು..? ಮಳೆಗಿಂತಲೂ ಜೋರಾಗಿ ಯಾವ ಚಿಂತೆ ಸುರೀತಿದೆ ನಿನ್ನ ತಲೆಯೊಳಗೆ..?'

ಜಂಪಯ್ಯ ಅವನ ಮಾತಿಗೆ ಪ್ರತಿಕ್ರಿಯಿಸುವ ಶಕ್ತಿಯೂ ಇಲ್ಲದವನಂತೆ ಕಾಲೆಳೆದುಕೊಂಡು ಮುಂದೆ ಸಾಗಿದಾಗ ಕಾಯನಿಗೆ ಸೋಜಿಗವೆನಿಸಿತು. ಅವನು ಮಳೆಯಲ್ಲಿ ನೆನೆದೇ ದಾಪುಗಾಲಿಕ್ಕಿ ಜಂಪಯ್ಯನ ಮನೆಯತ್ತ ದೌಡಾಯಿಸಿದ. ಜಂಪಯ್ಯ ಮೈಯ್ಯಲ್ಲಿ ಶಕ್ತಿಯೇ ಇಲ್ಲದವನಂತೆ ಜಗುಲಿಯಲ್ಲಿ ಕುಳಿತಿದ್ದ. ಪೂರ್ತಿಯಾಗಿ ತೋಯ್ದು ತೊಪ್ಪೆಯಾಗಿದ್ದವನ ಮೈಯಿಂದ ನೀರು ಕೆಳಗಿಳಿದು ಹರಿಯುತ್ತಿತ್ತು.

'ಏನಾಯಿತು ಜಂಪಣ್ಣ? ಯಾಕೆ ಒಂಥರ ಇದ್ದೀಯ?'

'ಈ ಜಾಗದ ಋಣ ಹರೀತು ಕಾಯ.. ಈ ಜಾಗದ ಮಾಲೀಕ ಬಂದಿದ್ದ.. ನಾಳೆಯೊಳಗೆ ಎಲ್ಲರೂ ಖಾಲಿ ಮಾಡಬೇಕಂತೆ.. ಪೋಲಿಸ್ ತರ್ತಾನಂತೆ..' ಕಾಯ ಬೆಚ್ಚಿಬಿದ್ದ. ಯೋಗೀಶರ ಮಾತು ಅವನಿಗೆ ಪಕ್ಕನೆ ನೆನಪಾಯಿತು. ಅವರು ಇಂಥ ಸಂಭವ ಎದುರಾಗಬಹುದೆಂದು ಸತತವಾಗಿ ಎಚ್ಚರಿಸಿದ್ದರು. ಆಗ ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ ಅದು ಸತ್ಯವಾಗಿ ಪರಿಣಮಿಸಿತ್ತು. ಕಾರಗದ್ದೆ ಈಗ ತಾಲೂಕಾಗಿ ಘೋಷಣೆಯಾದ ಬಳಿಕ, ಅಲ್ಲಾಗುತ್ತಿರುವ ಪರಿವರ್ತನೆಗಳು ಈಗ ಆ ವ್ಯಕ್ತಿಯನ್ನು ಇತ್ತ ಧಾವಿಸಿ ಬರುವಂತೆ ಮಾಡಿದೆ ಎಂದು ಇಬ್ಬರಿಗೂ ಮನದಟ್ಟಾಗಿತ್ತು.

ಸುದ್ದಿ ಎಲ್ಲ ಮನೆಗಳಿಗೂ ಹರಡಿತು. ಚಿಂತೆಯ ಮಳೆ ಎಲ್ಲರ ಮೇಲೂ ಸುರಿಯಿತು. ಎಲ್ಲರೂ ಒಟ್ಟು ಸೇರಿ ಚಿಂತನೆ ನಡೆಸಿದರು.

'ಇಷ್ಟು ದಿನ ಅವನು ಎಲ್ಲಿದ್ದನಂತೆ.. ಈ ಮಳೆಗೆ ಹೋಗು ಅಂದರೆ ಎಲ್ಲಿಗೆ ಹೋಗೋಣ..? ಮಳೆ ಕಳೆಯುವ ತನಕ ಕಾಯಲು ಆಗುವುದಿಲ್ಲವಂತಾ..?'

ಜಂಪಯ್ಯ ಮಾತನಾಡಲಿಲ್ಲ. ಅವನು ಆ ಮಾಲೀಕನನ್ನು ನೇರವಾಗಿ ಎದುರಿಸಿದ್ದರಿಂದ ಅವನ ಜಬರ್ದಸ್ತಿಕೆಗೆ ವಿಚಲಿತನಾಗಿ ಹೋಗಿದ್ದ.

'ಅವನು ಒಪ್ಪುವ ಆಸಾಮಿ ಅಲ್ಲ.. ಎಷ್ಟು ವಿನಂತಿಸಿಕೊಂಡರೂ ಆತ ಬಗ್ಗಲಿಲ್ಲ.. ಅವನಿಗೆ ನಮ್ಮ ಮೇಲೆ ನಂಬಿಕೆ ಇದ್ದಂತಿಲ್ಲ.. ವರ್ಷಗಳ ನಂತರ ಬಂದು ನೋಡಿದಾಗ ಅವನ ಜಾಗದಲ್ಲಿ ಯಾರೋ ನೆಲೆ ಊರಿರುವುದು ಕಂಡು ಅವನು ಸಿಟ್ಟೇಳುವುದು ಸಹಜವೇ..' ಜಂಪಯ್ಯ ತಗ್ಗಿದ ದನಿಯಲ್ಲೆಂದ.

'ಇದೆಲ್ಲ ಆದದ್ದು ನನ್ನಿಂದ .. ಇದರ ನೈತಿಕ ಹೊಣೆ ನನ್ನದು.. ನಿಮ್ಮನ್ನೆಲ್ಲಾ ನಾನು ಇಂಥ ಇಕ್ಕಟ್ಟಿಗೆ ಸಿಲುಕಿಸಿದಕ್ಕಾಗಿ ಕ್ಷಮೆ ಕೇಳುವೆ..' ಜಂಪಯ್ಯನ ಕಣ್ಣಿಂದ ಹರಿದ ಕಂಬನಿ ಮಳೆಯಿಂದ ತೋಯ್ದು ಹೋಗಿದ್ದ ಕಾರಣಕ್ಕೆ ಕಾಣದಾಯಿತು.

(ಸಶೇಷ)